
# Indian Institute of Astrophysics
## ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ

विज्ञान एवं प्रौद्योगिकी विभाग
DEPARTMENT OF SCIENCE AND TECHNOLOGY

# ಸಂಪೂರ್ಣ ಚಂದ್ರಗ್ರಹಣ
## ಸೆಪ್ಟೆಂಬರ್ 7-8, 2025

ಸೂರ್ಯ ಮತ್ತು ಚಂದ್ರರ ನಡುವೆ ಭೂಮಿ ಬಂದಾಗ ಭೂಮಿಯ ನೆರಳು ಚಂದ್ರನ ಮೇಲೆ ಬೀಳುತ್ತದೆ, ಇದರಿಂದಾಗಿ ಚಂದ್ರಗ್ರಹಣ ಸಂಭವಿಸುತ್ತದೆ. ಇದು ನೈಸರ್ಗಿಕ ವಿದ್ಯಮಾನವಾಗಿದ್ದು, ನಾವೆಲ್ಲರೂ ಇದನ್ನು ನೋಡಬಹುದು ಮತ್ತು ಇದರಿಂದ ನಮಗೆ ಯಾವುದೇ ಹಾನಿ ಉಂಟಾಗುವುದಿಲ್ಲ !




ಸೆಪ್ಟೆಂಬರ್ 7-8, 2025 ರ ರಾತ್ರಿ, ಚಂದ್ರನು ಸುಮಾರು 85 ನಿಮಿಷಗಳ ಕಾಲ ಭೂಮಿಯ ನೆರಳಿನಿಂದ ಸಂಪೂರ್ಣವಾಗಿ ಆವರಿಸಲ್ಪಡುವುದರಿಂದ ಪೂರ್ಣ ಚಂದ್ರಗ್ರಹಣ ಸಂಭವಿಸುತ್ತದೆ.

ಪಾರ್ಶ್ವ ಗ್ರಹಣದ ಹಂತದಲ್ಲಿ , ಚಂದ್ರನ ಒಂದು ಭಾಗವು ಮರೆಯಾಗುವುದನ್ನು ನಾವು ನೋಡಬಹುದು. ಪೂರ್ಣಗ್ರಹಣದ ಸಮಯದಲ್ಲಿ, ಚಂದ್ರನು ವಾಸ್ತವವಾಗಿ ಗಾಢ ಕೆಂಪು ಬಣ್ಣದಲ್ಲಿ ಕಾಣಿಸಿಕೊಳ್ಳುತ್ತಾನೆ!

### ಏನು & ಯಾವಾಗ?

- ಸೆಪ್ಟೆಂಬರ್ 7 ರಂದು ರಾತ್ರಿ 8:58ಕ್ಕೆ ಭೂಮಿಯ ಪಾರ್ಶ್ವಛಾಯೆಯ ತೆಳುವಾದ ನೆರಳು ಚಂದ್ರನನ್ನು ಆವರಿಸುತ್ತದೆ. ಕಂಡೂ ಕಾಣದ ಮುಸುಕಿನ ಈ ಹಂತವನ್ನು ಬರಿಗಣ್ಣಿನಿಂದ ಕಂಡುಹಿಡಿಯುವುದು ಕಷ್ಟ.
- ಚಂದ್ರ , ನಂತರ ರಾತ್ರಿ 9:57ಕ್ಕೆ ಕಪ್ಪಾಗಿ ಕಾಣುವ ಪೂರ್ಣ ಛಾಯಾ ಪ್ರದೇಶದ ಒಳಗೆ ಪ್ರವೇಶಿಸುತ್ತದೆ. ನಮ್ಮ ಬರಿಗಣ್ಣಿನಿಂದ ಚಂದ್ರ ಹೆಚ್ಚು ಹೆಚ್ಚು ಮರೆಯಾಗುವುದನ್ನು ನಾವು ಬಹಳ ಸುಲಭವಾಗಿ ನೋಡಬಹುದು.
- ರಾತ್ರಿ 11:01 ರಿಂದ 12:23 ರವರೆಗೆ ಚಂದ್ರ ಸಂಪೂರ್ಣವಾಗಿ ಗ್ರಹಣಗೊಳ್ಳುತ್ತದೆ. ಆಕಾಶದಿಂದ ಕಣ್ಮರೆಯಾಗುವ ಬದಲು, ನಮ್ಮ ವಾತಾವರಣದಿಂದ ಬರುವ ಸೂರ್ಯನ ಬೆಳಕು ವಕ್ರೀಭವನಗೊಳ್ಳುವುದರಿಂದ ಅದು ಗಾಢ ಕೆಂಪು ಬಣ್ಣವನ್ನು ಹೊಂದಿರುತ್ತದೆ!
- ಕ್ರಮವಾಗಿ ಬೆಳಗಿನ ಜಾವ 1:26ಕ್ಕೆ ಪೂರ್ಣ ಛಾಯೆಯಿಂದಲೂ ಮತ್ತು 2:25ಕ್ಕೆ ಪಾರ್ಶ್ವ ಛಾಯೆಯಿಂದಲೂ ಸಂಪೂರ್ಣವಾಗಿ ಚಂದ್ರ ಹೊರಬರುತ್ತದೆ.

| | |
|---|---|
| ಪಾರ್ಶ್ವ ಗ್ರಹಣದ ಪ್ರಾರಂಭ | 9:57 PM, 7/9/25 |
| ಪೂರ್ಣ ಗ್ರಹಣದ ಪ್ರಾರಂಭ | 11:01 PM, 7/9/25 |
| ಪೂರ್ಣ ಗ್ರಹಣದ ಅಂತ್ಯ | 12:23 AM, 8/9/25 |
| ಪಾರ್ಶ್ವ ಗ್ರಹಣದ ಅಂತ್ಯ | 1:26 AM, 8/9/25 |

### ಹೇಗೆ?

ಚಂದ್ರಗ್ರಹಣಗಳನ್ನು ನೋಡಲು ಯಾವುದೇ ವಿಶೇಷ ಸಾಧನದ ಅಗತ್ಯತೆ ಇಲ್ಲ ಮತ್ತು ಇದನ್ನು ಬರಿಗಣ್ಣಿನಿಂದಾಗಲೀ, ದುರ್ಬೀನಿನಿಂದಾಗಲಿ ಅಥವಾ ದೂರದರ್ಶಕದಿಂದಾಗಲೀ ನೋಡುವುದು ಸುರಕ್ಷಿತ. ಗ್ರಹಣವು ನೆರಳುಗಳ ಆಟವಾಗಿದ್ದು ಅದರಿಂದ ನಮಗಾಗಲಿ, ಪ್ರಾಣಿಗಳಿಗಾಗಲಿ ಅಥವಾ ಆಹಾರಕ್ಕಾಗಲಿ ಯಾವುದೇ ಹಾನಿ ಉಂಟಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ

ಗ್ರಹಣಗಳು ನೋಡಲು ತುಂಬಾ ಸುಂದರವಾಗಿರುತ್ತವೆ, ಇದನ್ನು ನೋಡಲು ಮರೆಯದಿರಿ - ಭಾರತದಿಂದ ನೋಡಬಹುದಾದ ಮುಂದಿನ ಸಂಪೂರ್ಣ ಚಂದ್ರಗ್ರಹಣ ಡಿಸೆಂಬರ್ 31, 2028 ರಂದು ಸಂಭವಿಸಲಿದೆ.

CC BY NC SA